ನಡುಬಾಡೆ ಇ–ಪತ್ರಿಕೆ

ASDCA No;SCAB13122025/5632149 UDYAM-KR-18-0022072 ಕೊಡಗಿನ ಪ್ರಥಮ ದ್ವಿಭಾಷ ಸಂಜೆ ಇ-ದೈನಿಕ

ಸಂಪುಟ:01 ಸಂಚಿಕೆ:49 ದಿನಾಂಕ: 26/11/26, ಗುರುವಾರ 8951073556 ನಾಳಂಕೆ ಬಿರ್ಯಾರ್ - 11, ಬ್ಯಾಳಾಚೆ

www.nadubadenews.com ಸಂಪಾದಕ: ಚಾಮೆರ ದಿನೇಶ್‌ಬೆಳ್ಯಪ್ಪ nadubadenews@gmail.com @nadubadenews

ಪುಟ: 1

ಅಂದೋಳ ಮೊಳಿಯಾನ ಪುತ್ತರಿ ಪೊವುದ್; ಮಿಂಞತ ಏಳ್ ನಾಳ್ ಮಂದ್ ಮನೆರ ಆಯಿಮೆ....

ಕೊಡವ ನಡ್ತುವ ಸ್ಕೂಲ್ ಕಾಲೇಜಿಕ್ ಏಳ್ ನಾಳ್ ರಜೆ ಬುಡುವನ್ನೆಕಾಡ್...

@nadubadenews; ವಿರಾಜಪೇಟೆ, ನ.26 ಪೊಮ್ಮಾಲೆ ಕೊಡವುಲ್ ಪುತ್ತರಿರ ಆಯಿಮೆ ಅಂದೋಳತ್ ಮೊಳಿಗೊಂಡಿತ್, ಕೊಡವಾಮೆರ ಬಾಳ್‌ನೆಲೆಯಾನ ನೆಲ್ಲ್‌ರ ಕದ್‌ನ ಕೊಂಡಾಡಿತ್ ಮನೆ ದುಂಬುಚಿಟ್ಟಂಡತ್.

ಇನ್ನನೆ ಮೊಳಿಯಾನ ಪುತ್ತರಿ ಇಂದ್‌ಂಜಿ ತೊಟ್ಟ್ ಮಿಂಞಕ್ ಏಳ್‌ನಾಳ್‌ಕೆತ್ತನೆ ಎಲ್ಲಾ ಊರ್ ನಾಡ್‌ಲೂ ಕೇರಿಮಂದ್, ನಾಡ್ ಮಂದ್, ಮನೆಪಾಟ್‌ಂಜಿ ತೊಟ್ಟ್ ಊರೋರ್ಮೆ, ನಾಡೊರ್ಮೆಕೆತ್ತನೆ ಅದದ್ ನಾಡ್ ಕೇರಿರ ಆಯಿಮೆ ಪೋಲೆ ಪದ್ದತಿರ ಆಟ್‌ಪಾಟ್ ನಡ್ಪದುಂಡ್.



ಈ ಎಲ್ಲಾ ಆಯಿಮೆ ಕೊಯಿಮೆಲೂ ನಂಗಡ ಮಕ್ಕಳೂ ಕೂಡಿಯಾಡಿತ್, ನಂಗಡ ಪರಂಪರೆರ ಭೀರ್ಯತ್‌ನ ಕಾಲ ಮುಂದಾರಕ್ ನಡ್ತಿ ಪೋಪನ್ನಕೆ ಆಂಡು. ಈ ನ್‌ಟ್ಟ್‌ಲ್ ಓದುವ ಮಕ್ಕಳ್ ಏಳ್ ನಾಳ್ ರಜೆರ ಅವಷ್ಯಕತೆ ಏರ ಉಂಡ್. ಸರ್ಕಾರ ಒಮ್ಮಕೇ ಈ ತೀರ್ಮಾನಕ್ ಬಪ್ಪದ್ ಕಷ್ಟ.

ಕೊಡವ ಸಮಾಜ ಕೂಡ್‌ನನಕೆ, ಕೊಡವಂಗ ನಡ್ತಿಯಂಡುಂಳ್ಳ ಸ್ಕೂಲ್ ಕಾಲೇಜ್‌ಕ್, ಬೋರೆ ರಜೆನ ಕಮ್ಮಿ ಮಾಡಿತ್, ಪುತ್ತರಿಕ್ ಏಳ್ ನಾಳ್ ರಜೆ ಕೊಡ್ತಕ, ಮಿಂಞಕ್ ಜನಾಂಗಕೂ ಸಂಸ್ಥೆನ ನಡುವೈಂಗಕೂ ನಲ್ಲದಾಪದಲ್ಲತೆ, ಸರ್ಕಾರಕೂ ಪುತ್ತರಿರ ಬೀರ್ಯತ್‌ನ ಅರ್‌ಂಜಿತ್ ಮಿಂಞಕ್ ಸರ್ಕಾರಿ ರಜೆ ತಪ್ಪಕೂ ಏತುವಾಪ. ಇಕ್ಕಾಕಲೇ ಕೆಲವು ಸಂಸಕೃತಿಕಾರ ಅಯಿಂಗಡ ನಮ್ಮೆ ನಾಳ್‌ಕೊತ್ತನಕೆ ಅಯಿಂಗ ನಡ್ತುವ ಶಿಕ್ಷಣ ಸಂಸ್ಥೆಲ್ ರಜೆ ಕೊಡ್ತಂಡುಳ್ಳಾನ ನಂಗ ಇಲ್ಲಿ ಸಾಕ್ಷಿ ಆಯಿತ್ ಎಡ್ತವಲು. ಕಾಲಮಿಂಞಕ್ ಈ ವಿಚಾರತ್‌ನ ಕಿಕ್ಕಿನೋಟಿತ್ ತೀರ್ಮಾನಕ್ ಬಂದಕ ನಂದಾಕು...

ನಾಳೆ ಕನಕದಾಸ ಜಯಂತಿ...



@Nadubadenews, ನ.26: ಮಡಿಕೇರಿ:- ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕøತಿ ಇಲಾಖೆ ಇವರ ಸಹಯೋಗದೊಂದಿಗೆ ಕನಕದಾಸರ ಜಯಂತಿ ಆಚರಣೆಯು ನವೆಂಬರ್, 27 ರಂದು ಬೆಳಗ್ಗೆ 11 ಗಂಟೆಗೆ ನಗರದ ಗಾಂಧಿ ಭವನದಲ್ಲಿ ನಡೆಯಲಿದೆ.

ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಪಿ.ಎಂ.ನರೇಂದ್ರಸ್ವಾಮಿ, ಶಾಸಕರಾದ ಡಾ.ಮಂತರ್ ಗೌಡ, ಮುಖ್ಯಮಂತ್ರಿ ಅವರ ರಾಜಕೀಯ ಕಾರ್ಯದರ್ಶಿ ಹಾಗೂ ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರಾದ ಎ.ಎಸ್.ಪೆÇ್ನಣ್ಣ, ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ರಾಜ್ಯಸಭಾ ಸದಸ್ಯರಾದ ಅಜಯ್ ಮಾಕನ್, ಕರ್ನಾಟಕ ವಿಧಾನ ಪರಿಷತ್ ಶಾಸಕರಾದ ಎಂ.ಪಿ.ಸುಜಾ ಕುಶಾಲಪ್ಪ, ಎಸ್.ಎಲ್.ಭೋಜೇಗೌಡ, ಡಾ.ಧನಂಜಯ ಸರ್ಜಿ, ಗ್ಯಾರಂಟಿ ಯೋಜನೆಗಳ ಅನುμÁ್ಠನ ಸಮಿತಿ ಜಿಲ್ಲಾ ಅಧ್ಯಕ್ಷರಾದ ಟಿ.ಎಂ.ಧರ್ಮಜ ಉತ್ತಪ್ಪ, ಕೊಡಗು ಜಿಲ್ಲಾ ಪಂಚಾಯತ್ ಆಡಳಿತಾಧಿಕಾರಿ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಎನ್.ವಿ.ಪ್ರಸಾದ್, ಕುಶಾಲನಗರ ಶ್ರೀಕಾಗಿನೆಲೆ ಕನಕ ಗುರುಪೀಠದ ಮೈಸೂರು ವಿಭಾಗದ ಧರ್ಮದರ್ಶಿಗಳು ಎಂ.ನಂಜುಂಡಸ್ವಾಮಿ, ಕೊಡಗು ಜಿಲ್ಲಾ ಕುರುಬ ಸಂಘದ ಅಧ್ಯಕ್ಷರಾದ ಮಹೇಶ್ ಎಚ್.ಎಸ್., ಸಂಗೊಳ್ಳಿ ರಾಯಣ್ಣ ಕುರುಬರ ಹಿತರಕ್ಷಣ ವೇದಿಕೆಯ ಜಿಲ್ಲಾಧ್ಯಕ್ಷರಾದ ಪ್ರಭಾಕರ ಡಿ.ಆರ್., ಕೊಡಗು ಜಿಲ್ಲಾ ಕುರುಬ ಸಂಘದ ಪ್ರಧಾನ ಕಾರ್ಯದರ್ಶಿ ಬಿ.ಎ.ಗಂಗಾಧರ, ಕೊಡಗು ಜಿಲ್ಲಾ ಕುರುಬ ಸಂಘದ ತಾಲ್ಲೂಕು ಅಧ್ಯಕ್ಷರಾದ ರವಿ ಗೌಡ, ಕುಶಾಲನಗರ ಹಿರಿಯ ರಂಗಭೂಮಿ ಕಲಾವಿದರಾದ ಬರಮಣ್ಣ ಟಿ.ಬೆಟಗೇರಿ, ಸೋಮವಾರಪೇಟೆ ತಾಲ್ಲೂಕು ಬೆಸೂರು ಪ್ರೌಢ ಶಾಲಾ ಶಿಕ್ಷಕರಾದ ಕೆ.ಎನ್.ಕಿರಣ್ ಕುಮಾರ್, ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್, ಜಿ.ಪಂ.ಸಿಇಒ ದಿನೇಶ್ ಕುಮಾರ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್.ಬಿಂದುಮಣಿ, ಹೆಚ್ಚುವರಿ ಜಿಲ್ಲಾಧಿಕಾರಿ ಜಯಲಕ್ಷ್ಮಿ ರಾಯಕೋಡ್, ಉಪ ವಿಭಾಗಾಧಿಕಾರಿ ಬಸನಗೌಡ ಕೋಟೂರು ಇತರರು ಪಾಲ್ಗೊಳ್ಳಲಿದ್ದಾರೆ.

ಜಾಹಿರಾತಿಗಾಗಿ ಸಂಪರ್ಕಿಸಿ: 8951073556

ಕಾಡಾನೆ ದಾಳಿಗೆ ಬೆಳೆಗಾರ ಬಲಿ...





@nadubadenews; ತಿತಿಮತಿ, ನ.26: ಕೊಡಗಿನಲ್ಲಿ ವನ್ಯಪ್ರಾಣಿ ಮಾನವ ಸಂಘರ್ಷ ಮುಂದುವರೆದಿದ್ದು, ಇಂದು ಮತ್ತೊಬ್ಬ ಬೆಳೆಗಾರರನ್ನು ಕಾಡಾನೆ ಬಲಿ ಪಡೆದಿದೆ.

ತಿತಿಮತಿ ಸಮಿಪದ ತಾರಿಕಟ್ಟೆ ನಿವಾಸಿ ಕೇಶವಯ್ಯ ಎಂಬ ಬೆಳೆಗಾರರನ್ನು ಅವರ ತೋಟದಲ್ಲಿಯೇ ಧಾಳಿಮಾಡಿದ ಕಾಡಾನ ಕೊಂದು ಹಾಕಿದೆ. ಇದರಿಂದಾಗಿ ಕೊಡಗಿನಲ್ಲಿ ವನ್ಯ ಮೃಗಗಳ ಅಟ್ಟಹಾಸಕ್ಕೆ ಮತ್ತೊಂದು ಬಲಿಯಾಗಿದ್ದು, ಸ್ಥಳೀಯರಿಂದ ತೀವ್ರ ಆಕ್ರೋಷ ವ್ಯಕ್ತವಾಗಿದೆ.

ಜಿಲ್ಲಾಡಳಿತದಿಂದ ಸಂವಿಧಾನ ದಿನಾಚರಣೆ



@Nadubadenews, ನ.26: ಮಡಿಕೇರಿ:- ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ನಗರದ ಗಾಂಧಿ ಭವನದಲ್ಲಿ ಇಂದು ಸಂವಿಧಾನ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಎಸ್.ಜೆ. ಸೋಮಶೇಖರ್ ಅವರು ಕಾರ್ಯಕ್ರಮ ಉದ್ಘಾಟಿಸಿದರು. ಬಳಿಕ ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರ ಹಾಗೂ ಸಂವಿಧಾನದ ಪೀಠಿಕೆಗೆ ಗಣ್ಯರು ಪುಷ್ಪಾರ್ಚನೆ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಸಂವಿಧಾನದ ಪೀಠಿಕೆಯನ್ನು ವಾಚಿಸುವ ಮೂಲಕ ಪ್ರತಿಜ್ಞಾವಿಧಿ ಸ್ವೀಕರಿಸಲಾಯಿತು. ಈ ಸಂದರ್ಭ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ದಿನೇಶ್ ಕುಮಾರ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದು ಮಣಿ, ಅಪರ ಜಿಲ್ಲಾಧಿಕಾರಿ ಜಯಲಕ್ಷ್ಮಿ, ಯುವಜನ ಸಮನ್ವಯಾಧಿಕಾರಿ ಭಾಗೀರಥಿ, ಮಡಿಕೇರಿ ತಾಲೂಕು ತಹಶೀಲ್ದಾರ್ ಶ್ರೀಧರ್, ಕುಶಾಲನಗರ ತಾಲೂಕು ತಹಶೀಲ್ದಾರ್ ರಮೇಶ್ ಬಾಬು ಹಾಗೂ ಸೋಮವಾರಪೇಟೆ ತಾಲೂಕು ತಹಶೀಲ್ದಾರ್ ಕೃಷ್ಣಮೂರ್ತಿ ಸೇರಿದಂತೆ ಇತರರು ಇದ್ದರು. ಗಾಯತ್ರಿ ಅವರು ಪ್ರಾರ್ಥನೆ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ರಾಷ್ಟ್ರಗೀತೆ ಹಾಗೂ ನಾಡಗೀತೆಯನ್ನು ಹಾಡಲಾಯಿತು.

ರಾಷ್ಟ್ರೀಯ ಅಥ್ಲೆಟಿಕ್ಸ್ ಕೂಟದಲ್ಲಿ ವಿರಾಜಪೇಟೆಯ ಪ್ರಗತಿ ಶಾಲೆಯ ವಿದ್ಯಾರ್ಥಿಗಳು



@Nadubadenews, ನ.26: ವಿರಾಜಪೇಟೆ: ಆಂಧ್ರಪ್ರದೇಶದ ಗುಂಟೂರಿನ ಆಚಾರ್ಯ ನಾಗಾರ್ಜುನ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ 'ರಾಷ್ಟ್ರೀಯ ಅಥ್ಲೆಟಿಕ್ಸ್ ಕೂಟ 2026' (National Athletics Meet 2026) ನಲ್ಲಿ ವಿರಾಜಪೇಟೆಯ ಪ್ರಗತಿ ಶಾಲೆಯ ವಿದ್ಯಾರ್ಥಿಗಳು ಪಾಲ್ಗೊಂಡಿದ್ದಾರೆ.

ಎಚ್‌ಸಿಎಲ್ ಫೌಂಡೇಶನ್ (HCL Foundation) ವತಿಯಿಂದ ಆಯೋಜಿಸಲಾಗಿರುವ 'ಸ್ಪೋರ್ಟ್ಸ್ ಫಾರ್ ಚೇಂಜ್' (Sports for Change) ಕಾರ್ಯಕ್ರಮದ ಮೊದಲ ಆವೃತ್ತಿಯ ಈ ಕ್ರೀಡಾಕೂಟವು ನವೆಂಬರ್ 26 ರಿಂದ 28, 2026 ರವರೆಗೆ ನಡೆಯಲಿದೆ. ಪ್ರಗತಿ ಶಾಲೆಯ 8ನೇ ತರಗತಿಯ ಜೋಯೆಲ್ ಮತ್ತು ಪ್ರತೀಕ್ಷಾ ಎಚ್.ಎಸ್., 9ನೇ ತರಗತಿಯ ಮೋನಿತ್ ಕಾರ್ಯಪ್ಪ ಹಾಗೂ 10ನೇ ತರಗತಿಯ ವಿನ್ಯಾ ಅವರು ಈ ಪ್ರತಿಷ್ಠಿತ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಭಾಗವಹಿಸುತ್ತಿದ್ದಾರೆ..

ನ.28 ರಂದು ಕರ್ಣಂಗೇರಿಯಲ್ಲಿ ಪ್ರಜಾಸೇವಾ ಅಭಿಯಾನ...

@Nadubadenews, ನ.26: ಮಡಿಕೇರಿ:- ತಾಲ್ಲೂಕಿನ ಮಡಿಕೇರಿ ಹೋಬಳಿಯ ಪ್ರಜಾಸೇವಾ ಅಭಿಯಾನವು ಶಾಸಕರಾದ ಡಾ.ಮಂತರ್ ಗೌಡ ಅವರ ಅಧ್ಯಕ್ಷತೆಯಲ್ಲಿ ನವೆಂಬರ್, 28 ರಂದು ಬೆಳಗ್ಗೆ 11 ಗಂಟೆಗೆ ಕರ್ಣಂಗೇರಿ ಗ್ರಾಮದ ಚಂದ್ರಗಿರಿ ಸಮುದಾಯ ಭವನದಲ್ಲಿ ನಡೆಯಲಿದೆ ಎಂದು ಮಡಿಕೇರಿ ತಾಲ್ಲೂಕು ತಹಶೀಲ್ದಾರ್ ಶ್ರೀಧರ ಅವರು ತಿಳಿಸಿದ್ದಾರೆ. ಸಾರ್ವಜನಿಕರು ಈ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳುವಂತೆ ಕೋರಿದ್ದಾರೆ.

ನ.29 ರಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಕೊಡಗು ಜಿಲ್ಲಾ ಪ್ರವಾಸ

@Nadubadenews, ನ.26: ಮಡಿಕೇರಿ:- ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ.ಪುರುಷೋತ್ತಮ ಬಿಳಿಮಲೆ ಅವರು ನವೆಂಬರ್, 29 ರಂದು ಕೊಡಗು ಜಿಲ್ಲಾ ಪ್ರವಾಸ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ.

ಮಾನ್ಯ ಅಧ್ಯಕ್ಷರು ನವೆಂಬರ್, 29 ರಂದು ಬೆಳಗ್ಗೆ 10 ಗಂಟೆಗೆ ಮಡಿಕೇರಿ ತಾಲ್ಲೂಕು ಚೆಂಬು ಗ್ರಾಮ ಕೂಡಡ್ಕ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕರ್ನಾಟಕ ಅರೆಭಾಷೆ ಸಂಸ್ಕøತಿ ಮತ್ತು ಸಾಹಿತ್ಯ ಅಕಾಡೆಮಿ ಆಯೋಜಿಸಿರುವ 'ಅರೆಭಾಷಾ ಸಾಹಿತ್ಯ ಸಮ್ಮೇಳನ' ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಅಧ್ಯಕ್ಷರ ಆಪ್ತ ಕಾರ್ಯದರ್ಶಿ ಟಿ.ಎಸ್.ಫಣಿಕುಮಾರ್ ಅವರು ತಿಳಿಸಿದ್ದಾರೆ.

ಕುಶಾಲನಗರ ಕೊಡವ ಸಮಾಜಕ್ ಪುದಿಯ ಕಾರ್ಯಕೂಟ: ಕೊರವುಕಾರನಾಯಿತ್ ಉಡುವೆರ ಹ್ಯಾರಿಚಿಟ್ಟಿಯಪ್ಪ



@nadubadenews; ಕುಶಾಲನಗರ, ನ.26 ಕುಶಾಲನಗರ ಕೊಡವ ಸಮಾಜಕ್ ಮಿಂಞತ ಆಡಳಿತಕ್ ಒತ್ತನ್ನಕೆ ಕೊರವುಕಾರನಾಯಿತ್ ಉಡುವೆರ ಹ್ಯಾರಿ ಚಿಟ್ಟಿಯಪ್ಪ ಕೂಟ್‌ಕೊರವುಕಾರನಾಯಿತ್ ಎಳ್ತಂಡ ರಂಜಿತ್, ಖನಪಟ್ಟ ಕಾರ್ಯಕಾರನಾಯಿತ್ ಚೆರುಮಂದಂಡ ಪ್ರಕಾಶ್ ಪಳಂಗಪ್ಪ ಲೆಕ್ಕಪಟ್ಟಿಕಾರನಾಯಿತ್ ಮಾಳೇಟಿರ ಪೂಣಚ್ಚ ಪಿಂಞ ಕೂಡ್‌ಕಾರ್ಯಕಾರನಾಯಿತ್ ಮೈಂದಪಂಡ ಜಗದೀಶ್ ಕೂಡ್‌ನನಕೆ ಕೂಡ್‌ಕೂಟ್‌ಕಾರಳ ಏಪುಚಿಟ್ಟಿತ್. ಇಕ್ಕಾಯಿತ್ ನಡ್‌ಂದ ಆಡಳಿತ ಪೈಪೋಟಿಲ್ ಕೊರವುಕಾರ, ಕೂಟ್‌ಕೊರವುಕಾರ, ಖನಪಟ್ಟ ಕಾರ್ಯಕಾರಂಗ ಸದಸ್ಯಂಗಡ ಓಟ್‌ಲ್ ಗೆದ್ದಕ, ಬಾಕಿ ಉಳ್ಳವು ಏದೇ ವಿರೋದ ಇಲ್ಲತೆ ಮಿಂಞತ ದಂಡ್ ಕಾಲ ಸಮಾಜತ್‌ರ ಕಾರ್ಯಭಾರ ನೀಸುವದುಂಡ್.



ದಿಯಾಭೀಮಯ್ಯ ಆದ್ಯ...



@Nadubadenews, ನ.26: ಸಿಕ್ಕಿಂನ ಪಾಲ್ ಜೋರ್ ಸ್ಟೇಡಿಯಂಲ್ ನವೆಂಬರ್ 14ಲಿಂಜ 21ಕೆತ್ತನೆ ನಡ್‌ಂದ ರಾಷ್ಟ್ರೀಯ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ಲ್ ಬೊಪ್ಪಂಡ ದಿಯಾ ಭೀಮಯ್ಯ ಆದ್ಯ ಇನಾಂ ಪಡ್‌ಂದಿತ್.

ಬ್ಯಾಡ್ಮಿಂಟನ್ ಅಸೋಸಿಯೇಷನ್ ಆಫ್ ಇಂಡಿಯಾತ್‌ರ ಆದನೆಲ್ ನಡ್‌ಂದ ಟೂರ್ನಿಲ್ 19 ಬಯತ್‌ರೊಳಿಯತ ಮೂಡಿಮಕ್ಕಡ ಡಬಲ್ಸ್ ವಿಭಾಗತ್ ಭಾರತತ ಆದ್ಯ ಶ್ರೇಯಾಂಕತ ಕಳಿಕಾರ್ತಿ ದಿಯಾ ಭೀಮಯ್ಯ ಹರಿಯಾಣತ ಬಾರುನಿ ಪರಸ್ವಾಲ್ ಅಯಿಂಗಡ ಕೂಡ್‌ಕೂಟ್ ಕಳ್‌ಚಿತ್ ಪ್ರಶಸ್ತಿ ಪಡ್‌ಂದಡಿತ್.

ಪ್ರತಾಪ್ ಸಿಂಹ ವಿರುದ್ಧ ದೂರು ನೀಡಿದ ಮಲೆಯಾಳಿ ಸಂಘ...



@Nadubadenews, ನ.26: ಮಾಜಿ ಸಂಸದ ಪ್ರತಾಪ್ ಸಿಂಹ ಅವರು ಸಾರ್ವಜನಿಕ ಕಾರ್ಯಕ್ರಮದಲ್ಲಿ ಕೇರಳದ ಜನರು ಹಾಗೂ ಮಲೆಯಾಳಿ ಸಮುದಾಯ ದ ವಿರುದ್ಧ ಅವಹೇಳನಕಾರಿ, ನಿಂದನಾತ್ಮಕ ಹಾಗೂ ದ್ವೇಷ ಭಾವನೆ ಮೂಡಿಸುವ ಹೇಳಿಕೆಗಳನ್ನು ನೀಡಿರುವ ಕುರಿತು ಗೋಣಿಕೊಪ್ಪ ಕೊಡಗು ಹಿಂದೂ ಮಲಯಾಳಿ ಸಮಾಜದಿದ ಇಂದು ದೂರು ದಾಖಲಿಸಲಾಗಿದೆ.

ಈ ಸಂದರ್ಭ ಕೊಡಗು ಹಿಂದೂ ಸಮಾಜದ ಅಧ್ಯಕ್ಷರಾದ. ಕೆ. ಪಿ. ಪ್ರಶಾಂತ್ ಕುಮಾರ್. ಸ್ಥಾಪಕ ಅಧ್ಯಕ್ಷ ರಾದ ಪಿ. ಎಸ್. ಶರತ್ ಕಾಂತ್, ಹಿರಿಯ ಉಪಾಧ್ಯಕ್ಷರಾದ ವೇಣುಕಣ್ಣನ್, ಸಮಾಜದ ಕಾನೂನು ಸಲಹೆಗಾರರಾದ, ಕೆ. ಬಿ. ಸಂಜೀವ್, ಸಮಾಜದ ಮಾಜಿ ಗೌರವ ಅಧ್ಯಕ್ಷರಾದ , ಪಿ. ಭಾಸ್ಕರ್, ಸದಸ್ಯರುಗಳಾದ, ವಿ..ಆರ್, ಸುಧೀರ್.. ಸಪ್ತೇಶ್ ರಾಮಕೃಷ್ಣನ್.. ಮಣಿಕಂಠ. ಕೆ ರಾಘವನ್ ಹಾಜರಿದ್ದರು.

ನಡುಬಾಡೆ ಇ-ಪತ್ರಿಕೆ
ASDCA No; SCAB13122025/5632149 JDYAM-KR-18-0022072 ಕೊಡಗಿನ ಪ್ರಥಮ ದ್ವಿಭಾಷ ಸಂಜೆ ಇ-ದೈನಿಕ
ದಿನಾಂಕ: 26/11/26, ಗುರುವಾರ 8951073556 ನಾಳಂಕೆ : ಬಿರ್ಯಾರ್ - 11, ಬ್ಯಾಳಾಚೆ
www.nadubadenews.com ಸಂಪಾದಕ: ಚಾಮರ ದಿನೇಶ್‌ಬೆಳ್ಯಪ್ಪ nadubadenews@gmail.com @nadubadenews

ನಾಳೆಯ (17 ನವೆಂಬರ್, 2026) ದ್ವಾದಶ ರಾಶಿಗಳ ಭವಿಷ್ಯ

ಮೇಷ
ವ್ಯಾಪಾರದಲ್ಲಿ ಹೊಸ ಪಾಲುದಾರಿಕೆಗಳು ರೂಪುಗೊಳ್ಳುವ ಸಾಧ್ಯತೆಯಿದೆ. ನಿಮ್ಮ ದೂರದೃಷ್ಟಿಯ ನಿರ್ಧಾರಗಳು ಭವಿಷ್ಯದಲ್ಲಿ ಉತ್ತಮ ಫಲ ನೀಡಲಿವೆ. ಕುಟುಂಬದ ಹಿರಿಯರ ಆರೋಗ್ಯ ಸುಧಾರಿಸಲಿದೆ.

ವೃಷಭ
ಆರ್ಥಿಕ ಸ್ಥಿತಿ ಬಲಗೊಳ್ಳಲಿದೆ. ಹಳೆಯ ಹೂಡಿಕೆಗಳಿಂದ ಲಾಭ ದೊರೆಯುವ ನಿರೀಕ್ಷೆಯಿದೆ. ಮಾತುಗಳಲ್ಲಿ ಸಂಯಮ ಕಾಯ್ದುಕೊಳ್ಳುವುದು ಒಳಿತು.

ಮಿಥುನ
ಕೆಲಸದ ಒತ್ತಡ ಹೆಚ್ಚಿದ್ದರೂ ನಿಮ್ಮ ಶ್ರಮಕ್ಕೆ ತಕ್ಕ ಮನ್ನಣೆ ಸಿಗಲಿದೆ. ಪ್ರಯಾಣದ ಯೋಗವಿದೆ; ಅಗತ್ಯ ದಾಖಲೆಗಳನ್ನು ಮುಂಚಿತವಾಗಿ ಸಿದ್ಧಪಡಿಸಿಕೊಳ್ಳಿ.

ಕರ್ಕಾಟಕ
ಮನೆಯಲ್ಲಿ ಶುಭ ಕಾರ್ಯಗಳ ಕುರಿತು ಚರ್ಚೆ ನಡೆಯಬಹುದು. ಬಂಧುಮಿತ್ರರ ಭೇಟಿಯಿಂದ ಮನಸ್ಸಿಗೆ ನೆಮ್ಮದಿ ದೊರೆಯಲಿದೆ. ಖರ್ಚುಗಳ ಮೇಲೆ ನಿಗಾ ಇರಲಿ.

ಸಿಂಹ
ನಾಯಕತ್ವದ ಗುಣಗಳು ನಿಮ್ಮನ್ನು ಮುನ್ನಡೆಸಲಿವೆ. ಉದ್ಯೋಗ ಕ್ಷೇತ್ರದಲ್ಲಿ ಹೊಸ ಜವಾಬ್ದಾರಿಗಳು ಬರಬಹುದು. ಹಿರಿಯರ ಸಲಹೆಗಳು ಉಪಯುಕ್ತವಾಗಲಿವೆ.

ಕನ್ಯಾ
ಯೋಜನೆಗಳನ್ನು ವ್ಯವಸ್ಥಿತವಾಗಿ ಜಾರಿಗೆ ತರುವಿರಿ. ಆರೋಗ್ಯದ ಕಡೆ ಸ್ವಲ್ಪ ಗಮನ ಹರಿಸಿ; ಸಮಯಕ್ಕೆ ಸರಿಯಾಗಿ ಆಹಾರ ಸೇವಿಸಿ. ಆರ್ಥಿಕ ವ್ಯವಹಾರಗಳಲ್ಲಿ ಎಚ್ಚರಿಕೆ ಅಗತ್ಯ.

ತುಲಾ
ಸಹೋದ್ಯೋಗಿಗಳ ಸಹಕಾರದಿಂದ ಪ್ರಮುಖ ಕೆಲಸವೊಂದು ಪೂರ್ಣಗೊಳ್ಳಲಿದೆ. ಕಲೆ, ಮಾಧ್ಯಮ ಮತ್ತು ಸೃಜನಶೀಲ ಕ್ಷೇತ್ರದಲ್ಲಿರುವವರಿಗೆ ಉತ್ತಮ ಅವಕಾಶಗಳು ಲಭಿಸಲಿವೆ.

ವೃಶ್ಚಿಕ
ಮಹತ್ವದ ತೀರ್ಮಾನ ತೆಗೆದುಕೊಳ್ಳುವ ಮುನ್ನ ಸಾಧಕ-ಬಾಧಕಗಳನ್ನು ಪರಿಶೀಲಿಸಿ. ಹಠಮಾರಿತನ ಬಿಟ್ಟು ಹೊಂದಾಣಿಕೆಯಿಂದ ನಡೆದರೆ ಕುಟುಂಬದಲ್ಲಿ ಸಾಮರಸ್ಯ ನೆಲೆಸಲಿದೆ.

ಧನು
ದೈವಿಕ ಚಿಂತನೆ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ಆಸಕ್ತಿ ಹೆಚ್ಚಲಿದೆ. ದೂರದ ಸ್ಥಳಗಳಿಂದ ಶುಭ ಸುದ್ದಿ ಬರುವ ಸಾಧ್ಯತೆಯಿದೆ. ಆರ್ಥಿಕವಾಗಿ ಸಮತೋಲನ ಕಾಯ್ದುಕೊಳ್ಳಿ.

ಮಕರ
ವೃತ್ತಿಜೀವನದಲ್ಲಿ ಸ್ಥಿರತೆ ಕಂಡುಬರಲಿದೆ. ಕಠಿಣ ಪರಿಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯಲಿದೆ. ಆಸ್ತಿ ಅಥವಾ ವಾಹನ ಸಂಬಂಧಿತ ವಿಚಾರಗಳಲ್ಲಿ ಪ್ರಗತಿ ಕಾಣಬಹುದು..

ಕುಂಭ
ಹೊಸ ಆಲೋಚನೆಗಳು ಕಾರ್ಯರೂಪಕ್ಕೆ ಬರಲಿವೆ. ಸ್ನೇಹಿತರೊಂದಿಗೆ ಮಹತ್ವದ ವಿಚಾರ ಹಂಚಿಕೊಳ್ಳುವಿರಿ. ಅನಗತ್ಯ ವಾದ-ವಿವಾದಗಳಿಂದ ದೂರವಿರಿ.

ಮೀನ
ಮನಸ್ಸು ಶಾಂತವಾಗಿರಲಿದ್ದು, ಬಾಕಿ ಉಳಿದ ಕೆಲಸಗಳನ್ನು ಪೂರ್ಣಗೊಳಿಸಲು ಇದು ಸೂಕ್ತ ಸಮಯ. ಕುಟುಂಬದವರೊಂದಿಗೆ ಸಂತಸದ ಕ್ಷಣಗಳನ್ನು ಕಳೆಯುವಿರಿ.

(ಗಮನಿಸಿ: ರಾಶಿ ಭವಿಷ್ಯವು ಸಾಮಾನ್ಯ ಗ್ರಹಚಾರವನ್ನು ಆಧರಿಸಿದ್ದು, ವೈಯಕ್ತಿಕ ಜಾತಕಕ್ಕೆ ಅನುಗುಣವಾಗಿ ಸ್ವಲ್ಪ ಬದಲಾವಣೆಗಳಿರಬಹುದು.)

ಘತ ಕಾಲದಲ್ಲಿ ಈ ದಿನ...
26 ನವೆಂಬರ್ 2026


ಸಂಗ್ರಹ;
ಕರಿನೆರವಂಡ ಡ್ಯಾನಿ ಕುಶಾಲಪ್ಪ

⭐ *ಭಾರತದ ಸಂವಿಧಾನ ದಿನ (1949).* ಡಾ. ಬಿ.ಆರ್. ಅಂಬೇಡ್ಕರ್ ನೇತೃತ್ವದ ಕರಡು ಸಮಿತಿಯು ಸಿದ್ಧಪಡಿಸಿದ ಸಂವಿಧಾನವನ್ನು ಸಂವಿಧಾನ ರಚನಾ ಸಭೆಯು ಅಧಿಕೃತವಾಗಿ ಅಂಗೀಕರಿಸಿತು. ಇದರ ಸವಿನೆನಪಿಗಾಗಿ ಪ್ರತಿ ವರ್ಷ ಈ ದಿನವನ್ನು 'ಸಂವಿಧಾನ ದಿನ' (ರಾಷ್ಟ್ರೀಯ ಕಾನೂನು ದಿನ) ಎಂದು ಆಚರಿಸಲಾಗುತ್ತದೆ

⭐ *ರಾಷ್ಟ್ರೀಯ ಹಾಲು ದಿನ (1921). '* ಭಾರತದ ಶ್ವೇತ ಕ್ರಾಂತಿಯ ಪಿತಾಮಹ' ಹಾಗೂ ಅಮುಲ್ (Amul) ಸಂಸ್ಥಾಪಕ ಡಾ. ವರ್ಗೀಸ್ ಕುರಿಯನ್ ಅವರು ಈ ದಿನ ಜನಿಸಿದರು. ಅವರ ಗೌರವಾರ್ಥ ಈ ದಿನವನ್ನು ರಾಷ್ಟ್ರೀಯ ಹಾಲು ದಿನವಾಗಿ ಆಚರಿಸಲಾಗುತ್ತದೆ

⭐ *ಮುಂಬೈ ಭಯೋತ್ಪಾದಕ ದಾಳಿ (2008).* ಪಾಕಿಸ್ತಾನ ಮೂಲದ ಲಷ್ಕರ್-ಎ-ತೊಯ್ಬಾ ಉಗ್ರರು ಮುಂಬೈನ ತಾಜ್ ಹೋಟೆಲ್, ಛತ್ರಪತಿ ಶಿವಾಜಿ ಟರ್ಮಿನಸ್ ಸೇರಿದಂತೆ ಪ್ರಮುಖ ಸ್ಥಳಗಳ ಮೇಲೆ ನಡೆಸಿದ ಭೀಕರ ದಾಳಿಯಲ್ಲಿ 170ಕ್ಕೂ ಹೆಚ್ಚು ಅಮಾಯಕರು ಮತ್ತು ವೀರ ಯೋಧರು ಪ್ರಾಣ ಕಳೆದುಕೊಂಡರು

⭐ *ಮೊದಲ ಎಸ್‌ಟಿಡಿ (STD) ಸೇವೆ ಆರಂಭ (1960)* . ಭಾರತದಲ್ಲಿ ಮೊದಲ ಬಾರಿಗೆ ಕಾನ್ಪುರ ಮತ್ತು ಲಕ್ನೋ ನಗರಗಳ ನಡುವೆ ಚಂದಾದಾರರ ಟ್ರಂಕ್ ಡಯಲಿಂಗ್ (STD) ದೂರವಾಣಿ ಸೇವೆಯನ್ನು ಪ್ರಾರಂಭಿಸಲಾಯಿತು

⭐ *ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರಿಗೆ ಭಾರತ ರತ್ನ (1997).* ಖ್ಯಾತ ವಿಜ್ಞಾನಿ ಮತ್ತು ಮಾಜಿ ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರಿಗೆ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ಭಾರತ ರತ್ನ'ವನ್ನು ನೀಡಿ ಗೌರವಿಸಲಾಯಿತು

⭐ *ಅಮೆರಿಕದ ಮೊದಲ ಕ್ಯಾಬಿನೆಟ್ ಸಭೆ (1791):* ಅಮೆರಿಕದ ಮೊದಲ ಅಧ್ಯಕ್ಷ ಜಾರ್ಜ್ ವಾಷಿಂಗ್ಟನ್ ಅವರು 1791ರ ನವೆಂಬರ್ 26ರಂದು ತಮ್ಮ ಮೊದಲ ಪೂರ್ಣ ಪ್ರಮಾಣದ ಕ್ಯಾಬಿನೆಟ್ ಸಭೆಯನ್ನು ನಡೆಸಿದರು.

⭐ *ಮಂಗಳ ಗ್ರಹಕ್ಕೆ ನೌಕೆ (1996):* ಮಂಗಳ ಗ್ರಹದಲ್ಲಿ ಜೀವಿಗಳ ಅಸ್ತಿತ್ವದ ಸಾಧ್ಯತೆಯನ್ನು ಅಧ್ಯಯನ ಮಾಡಲು ನಾಸಾ (NASA) 'ಮಾರ್ಸ್ ಗ್ಲೋಬಲ್ ಸರ್ವೇಯರ್' ಬಾಹ್ಯಾಕಾಶ ನೌಕೆಯನ್ನು ಉಡಾವಣೆ ಮಾಡಿತು.

⭐ *ಆಸ್ಟ್ರೇಲಿಯನ್ ಓಪನ್ ಆರಂಭ (1905):* ಇಂದಿನ ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯ ಮೊದಲ ಆವೃತ್ತಿಯ (ಆಸ್ಟ್ರೇಲಿಯನ್ ಚಾಂಪಿಯನ್‌ಶಿಪ್) ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ ರಾಡ್ನಿ ಹೀತ್ ಗೆಲುವು ಸಾಧಿಸಿದರು.

⭐ *ನ್ಯಾಷನಲ್ ಹಾಕಿ ಲೀಗ್ (NHL) ಸ್ಥಾಪನೆ (1917):* ವಿಶ್ವದ ಪ್ರಮುಖ ಐಸ್ ಹಾಕಿ ಲೀಗ್ ಆದ ನ್ಯಾಷನಲ್ ಹಾಕಿ ಲೀಗ್ ಕೆನಡಾದ ಮಾಂಟ್ರಿಯಲ್‌ನಲ್ಲಿ ಅಧಿಕೃತವಾಗಿ ಸ್ಥಾಪನೆಯಾಯಿತು.

⭐ *ರೋಚಕ ಟೈ ಆದ ಟೆಸ್ಟ್ ಪಂದ್ಯ (2011):* ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಭಾರತ ಮತ್ತು ವೆಸ್ಟ್ ಇಂಡೀಸ್ ನಡುವೆ ನಡೆದ ಟೆಸ್ಟ್ ಪಂದ್ಯದ ಕೊನೆಯ ಎಸೆತದಲ್ಲಿ ಆರ್. ಅಶ್ವಿನ್ ಎರಡನೇ ರನ್ ಗಳಿಸಲು ಪ್ರಯತ್ನಿಸಿ ರನೌಟ್ ಆದರು. ಇದರಿಂದಾಗಿ ಟೆಸ್ಟ್ ಕ್ರಿಕೆಟ್ ಇತಿಹಾಸದ ಅತ್ಯಂತ ಅಪರೂಪದ 'ಟೈ' (Tie) ಫಲಿತಾಂಶ ದಾಖಲಾಯಿತು

⭐ *ಫಾರ್ಮುಲಾ 1 ಚಾಂಪಿಯನ್‌ಶಿಪ್ (2017 ಮತ್ತು 2023):* 2017ರಲ್ಲಿ ಲೂಯಿಸ್ ಹ್ಯಾಮಿಲ್ಟನ್ ತಮ್ಮ 4ನೇ ಫಾರ್ಮುಲಾ 1 ವಿಶ್ವ ಚಾಂಪಿಯನ್‌ಶಿಪ್ ಗೆದ್ದರೆ, 2023ರಲ್ಲಿ ಮ್ಯಾಕ್ಸ್ ವರ್ಸ್ಟಪ್ಪನ್ ಅಬುಧಾಬಿ ಗ್ರ್ಯಾಂಡ್ ಪ್ರಿಕ್ಸ್ ಗೆಲ್ಲುವ ಮೂಲಕ ಋತುವಿನ ದಾಖಲೆಯ 19ನೇ ಜಯ ಸಾಧಿಸಿದರು.

⭐ *ಫಾಫ್ ಡು ಪ್ಲೆಸಿಸ್ ಚೊಚ್ಚಲ ಶತಕ (2012):* ದಕ್ಷಿಣ ಆಫ್ರಿಕಾದ ಬ್ಯಾಟರ್ ಫಾಫ್ ಡು ಪ್ಲೆಸಿಸ್ ಅವರು ಆಸ್ಟ್ರೇಲಿಯಾ ವಿರುದ್ಧ ಅಡಿಲೇಡ್‌ನಲ್ಲಿ ತಮ್ಮ ಚೊಚ್ಚಲ ಟೆಸ್ಟ್ ಪಂದ್ಯದಲ್ಲೇ ಅಜೇಯ ಶತಕ (110*) ಗಳಿಸಿ ಪಂದ್ಯವನ್ನು ಡ್ರಾ ಮಾಡಿಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಉದ್ಯೋಗ ಮಾಹಿತಿ...

ಕರ್ನಾಟಕ ಅರಣ್ಯ ಇಲಾಖೆ (KFD - ಬೀಟ್ ಫಾರೆಸ್ಟರ್ / ಅರಣ್ಯ ರಕ್ಷಕ ನೇಮಕಾತಿ 2026)
- **ಹುದ್ದೆಗಳ ವಿವರ: ಬೀಟ್ ಫಾರೆಸ್ಟರ್ (Beat Forester / Forest Guard) ಹುದ್ದೆಗಳು.**
- **ಖಾಲಿ ಹುದ್ದೆಗಳು: ಒಟ್ಟು 450 ಹುದ್ದೆಗಳು (355 ಉಳಿಕೆ ಮೂಲ ವೃಂದ ಹಾಗೂ 95 ಕಲ್ಯಾಣ ಕರ್ನಾಟಕ ವಲಯ).**
- **ವಿದ್ಯಾರ್ಹತೆ: 2ನೇ ಪಿಯುಸಿ (PUC / 12ನೇ ತರಗತಿ) ಅಥವಾ ತತ್ಸಮಾನ ವಿದ್ಯಾರ್ಹತೆ.**
- **ಸಂಬಳ: ಸರ್ಕಾರದ ವೇತನ ಶ್ರೇಣಿಯಂತೆ ರೂ. 37,500 ರಿಂದ ರೂ. 76,100 ರವರೆಗೆ.**
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 22 ಡಿಸೆಂಬರ್ 2026 (ಶುಲ್ಕ ಪಾವತಿಗೆ 23 ಡಿಸೆಂಬರ್ 2026).**
- **ಅಧಿಕೃತ ವೆಬ್‌ಸೈಟ್:** https://cetonline.karnataka.gov.in/kea/

ರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ (KSFES - ಅಗ್ನಿಶಾಮಕ ನೇಮಕಾತಿ 2026)
- ಹುದ್ದೆಗಳ ವಿವರ: ಅಗ್ನಿಶಾಮಕ (Fire Fighter) ಹುದ್ದೆಗಳು.
- ಖಾಲಿ ಹುದ್ದೆಗಳು: ಒಟ್ಟು 460 ಹುದ್ದೆಗಳು.
- ವಿದ್ಯಾರ್ಹತೆ: ಎಸ್‌ಎಸ್‌ಎಲ್‌ಸಿ (SSLC / 10ನೇ ತರಗತಿ) ಅಥವಾ ತತ್ಸಮಾನ ವಿದ್ಯಾರ್ಹತೆ.
- ಸಂಬಳ: ಸರ್ಕಾರದ ವೇತನ ಶ್ರೇಣಿಯಂತೆ ರೂ. 37,500 ರಿಂದ ರೂ. 76,100 ರವರೆಗೆ.
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 22 ಡಿಸೆಂಬರ್ 2026 (ಶುಲ್ಕ ಪಾವತಿಗೆ 23 ಡಿಸೆಂಬರ್ 2026).
- ಅಧಿಕೃತ ವೆಬ್‌ಸೈಟ್: https://cetonline.karnataka.gov.in/kea/

ಕರ್ನಾಟಕ ಪರೀಕ್ಷಾ ಪ್ರಾಧಿಕಾರ (KEA - ಸಹಾಯಕ ಸರ್ಕಾರಿ ಅಭಿಯೋಜಕರ ನೇಮಕಾತಿ 2026) ಹುದ್ದೆಗಳ ವಿವರ: ಸಹಾಯಕ ಸರ್ಕಾರಿ ಅಭಿಯೋಜಕರು ಮತ್ತು ಸಹಾಯಕ ಸರ್ಕಾರಿ ವಕೀಲರು (Assistant Public Prosecutor-cum-Assistant Government Pleader - Group B).
- ಖಾಲಿ ಹುದ್ದೆಗಳು: ಒಟ್ಟು 320 ಹುದ್ದೆಗಳು (268 ಉಳಿಕೆ ಮೂಲ ವೃಂದ ಹಾಗೂ 52 ಕಲ್ಯಾಣ ಕರ್ನಾಟಕ ವಲಯ).
- ವಿದ್ಯಾರ್ಹತೆ: ಕಾನೂನು ಪದವಿ (LLB) ಮತ್ತು ಕನಿಷ್ಠ 3 ವರ್ಷಗಳ ವಕೀಲ ವೃತ್ತಿಯ ಅನುಭವ.
- ಸಂಬಳ: ಸರ್ಕಾರದ ವೇತನ ಶ್ರೇಣಿಯಂತೆ ರೂ. 69,250 ರಿಂದ ರೂ. 1,34,200 ರವರೆಗೆ.
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15 ಡಿಸೆಂಬರ್ 2026 (ಶುಲ್ಕ ಪಾವತಿಗೆ 16 ಡಿಸೆಂಬರ್ 2026).
- ಅಧಿಕೃತ ವೆಬ್‌ಸೈಟ್: https://cetonline.karnataka.gov.in/kea/



ಮಡಿಕೇರಿಯಲ್ಲಿ ಇನ್ನು ರಸ್ತೆತಡೆ ನಿಷೇಧ ; ಡಿಸಿ ಆದೇಶ



@Nadubadenews, ನ.26: ಮಡಿಕೇರಿ ನಗರದ ಜಿಟಿ ವೃತ್ತದ ವ್ಯಾಪ್ತಿಯಲ್ಲಿ ಪ್ರತಿಭಟನೆ, ಧರಣಿ, ಮೆರವಣಿಗೆ ಹಾಗೂ ಮಾನವ ಸರಪಳಿ ನಡೆಸುವುದಕ್ಕೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಸೋಮಶೇಖರ್ ಎಸ್.ಜೆ. ನಿರ್ಬಂಧ ವಿಧಿಸಿ ಆದೇಶ ಹೊರಡಿಸಿದ್ದಾರೆ.

ನಗರದಲ್ಲಿ ಸಾರ್ವಜನಿಕ ಶಾಂತಿ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವುದು ಹಾಗೂ ವಾಹನಗಳ ಸಂಚಾರಕ್ಕೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳುವ ಉದ್ದೇಶದಿಂದ ಈ ಆದೇಶ ಹೊರಡಿಸಲಾಗಿದೆ.

ನಗರದಲ್ಲಿ ಸಾರ್ವಜನಿಕ ಶಾಂತಿ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವುದು ಹಾಗೂ ವಾಹನಗಳ ಸಂಚಾರಕ್ಕೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳುವ ಉದ್ದೇಶದಿಂದ ಈ ಆದೇಶ ಹೊರಡಿಸಲಾಗಿದೆ. ಕರ್ನಾಟಕ ಪೊಲೀಸ್ ಕಾಯ್ದೆ 1963ರ ಕಲಂ 31(1), ಮೋಟಾರು ವಾಹನಗಳ ಕಾಯ್ದೆ 1988ರ ಕಲಂ 115, ಕರ್ನಾಟಕ ವಾಹನಗಳ ನಿಯಮಗಳು 1989ರ ನಿಯಮ 221(5) ಹಾಗೂ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ (BNSS) 2023ರ ಕಲಂ 163ರ ಅಡಿಯಲ್ಲಿ ಜಿಲ್ಲಾಧಿಕಾರಿಗಳು ಈ ಆದೇಶ ಹೊರಡಿಸಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಹೆಚ್ಚುವರಿ ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿಗಳು ಸೇರಿದಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶದ ಪ್ರತಿಯನ್ನು ರವಾನಿಸಲಾಗಿದೆ.

ಜಿಲ್ಲಾಧಿಕಾರಿ ಸೋಮಶೇಖರ್ ಅವರು ನ.24ರಂದು ಡಿಜಿಟಲ್ ಸಹಿಯೊಂದಿಗೆ ಈ ಆದೇಶ ಹೊರಡಿಸಿದ್ದಾರೆ. ಕೊಡಗು ಜಿಲ್ಲಾಧಿಕಾರಿಗಳ ಅಧಿಕೃತ ಆದೇಶದ ಪ್ರಕಾರ ಮಡಿಕೇರಿ ನಗರ ವ್ಯಾಪ್ತಿಗೆ ಈ ನಿರ್ಬಂಧ ಅನ್ವಯವಾಗಲಿದೆ.

ಕಾರ್ತಿಕ ಸೋಮವಾರದಂದು ಭಗಂಡೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ ಹಾಗೂ ಆರಾಧನೆ





@Nadubadenews, ನ.19:ಮಡಿಕೇರಿ: ಶ್ರೀ ಭಗಂಡೇಶ್ವರ ದೇವಾಲಯದಲ್ಲಿ ನ.30ನೇ ಸೋಮವಾರ ರಾತ್ರಿ 07:00 ಗಂಟೆಗೆ ಕಾರ್ತಿಕ ಸೋಮವಾರದ ಪ್ರಯುಕ್ತ ವಿಶೇಷ ಪೂಜೆ ಹಾಗೂ ದೀಪಾರಾಧನೆ ನಡೆಯಲಿದೆ. ಕಾರ್ತಿಕ ಸೋಮವಾರ ದಿನದಂದು ಶಿವನ ಆರಾಧನೆಗೆ ಅತ್ಯಂತ ಶ್ರೇಷ್ಠವಾಗಿದ್ದು ಭಕ್ತರ ಭಯ, ಕಷ್ಟ ದೋಷಗಳನ್ನು ನಿವಾರಿಸಿ, ರಕ್ಷಣೆ ನೀಡುವ ದೇವರು ಎಂಬ ನಂಬಿಕೆ ಇದೆ. ಆ ದಿನ ಬೆಳಿಗ್ಗೆಯಿಂದಲೇ ದೇವಸ್ಥಾನದಲ್ಲಿ ವಿಶೇಷ ಅಭಿಷೇಕ, ರುದ್ರಾಭಿಷೇಕ, ಅಲಂಕಾರ, ಮಹಾಪೂಜೆ, ಸಂಜೆ 07 ಗಂಟೆಗೆ ವಿಶೇಷ ಪೂಜೆ ದೀಪಾರಾಧನೆ ನಂತರ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ ನಡೆಯಲಿದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ದೀಪಾರಾಧನೆಯಲ್ಲಿ ಪಾಲ್ಗೊಂಡು, ದೇವರ ದರ್ಶನ ಪಡೆಯುವ ಮೂಲಕ ಪೂಜಾ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ದೇವಸ್ಥಾನದ ಆಡಳಿತ ಮಂಡಳಿಯ ಪರವಾಗಿ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷರಾದ ಶ್ರೀ ಪ್ರಧೂ ಬಿ. ಎನ್ ಇವರು ಕೋರಿರುತ್ತಾರೆ.

ಕೊಡಗು ಜಿಲ್ಲೆಯ ವಿಶೇಷ ಹವಾಮಾನ ವರದಿ...

ನಾಳೆ ಅಲ್ಲಲ್ಲಿ ಸಣ್ಣ ಪ್ರಮಾಣದ ಮಳೆ ಸಂಭವ

- ಹಗಲಿನ ವಾತಾವರಣ: ನಾಳೆ (ದಿನಾಂಕ 27/11/2026) ಕೊಡಗು, ಕರ್ನಾಟಕದಲ್ಲಿ ಮೋಡ ಕವಿದ ವಾತಾವರಣವಿರಲಿದ್ದು, ಗರಿಷ್ಠ ತಾಪಮಾನವು 27°C ತಲುಪಲಿದೆ. ವಾತಾವರಣದಲ್ಲಿ ತೇವಾಂಶವು ಶೇಕಡಾ 85% ರಷ್ಟಿರಲಿದ್ದು, ಯುವಿ (UV) ಸೂಚ್ಯಂಕವು 2 (ಕಡಿಮೆ) ಇರಲಿದೆ.
- ಮಳೆಯ ಮುನ್ಸೂಚನೆ: ಹಗಲಿನಲ್ಲಿ ಮಳೆಯಾಗುವ ಸಂಭವವು ಶೇಕಡಾ 20% ರಷ್ಟಿದ್ದು, ಬೆಳಗಿನ ಜಾವ ಹಾಗೂ ಮುಂಜಾನೆ ವೇಳೆ ಅಲ್ಲಲ್ಲಿ ತುಂತುರು ಮಳೆಯಾಗುವ ಸಾಧ್ಯತೆಯಿದೆ (ಶೇಕಡಾ 10% ರಿಂದ 20% ರಷ್ಟು).
- ರಾತ್ರಿಯ ವಾತಾವರಣ: ರಾತ್ರಿ ವೇಳೆಯೂ ಮೋಡ ಕವಿದ ವಾತಾವರಣ ಮುಂದುವರಿಯಲಿದ್ದು, ಕನಿಷ್ಠ ತಾಪಮಾನವು 21°C ವರೆಗೆ ಇಳಿಯಲಿದೆ.
- ಗಾಳಿಯ ದಿಕ್ಕು ಮತ್ತು ವೇಗ: ಗಾಳಿಯು ಈಶಾನ್ಯ ದಿಕ್ಕಿನಿಂದ ಗಂಟೆಗೆ ಸುಮಾರು 6 ಮೈಲಿ (ಸುಮಾರು 9–10 ಕಿ.ಮೀ) ವೇಗದಲ್ಲಿ ಬೀಸಲಿದೆ.